ಕವಿತೆ





**ಕಮಲಾಕರ ಕಡವೆ**

ಕಲೆ: ಪ್ರಭಾಕರ ಹೆಗಡೆ

# ಬಾಗಿಲಿಗೆ ಬಂದ ಕರೆ




ಅವರು ಬಂದಿದ್ದಾರೆ
ಬಾಗಿಲಲ್ಲಿಯೇ ನಿಂತು ಕಾಯುತ್ತಿರುವ ಕರೆಯಂತೆ

ಗವ್ವನೆ ಕವಿದ ಬಾನಿನಂತೆ
ಇದ್ದೇ ಇರುತ್ತದೆ ಏನೇ ಆದರೂ
ದಿನಚರಿ

ಬಣ್ಣ ಹಚ್ಚಿ ಕುಪ್ಪಳಿಸಿ ಕುಣಿಯಲು
ಹೊರಟ ಪಾತ್ರಧಾರಿಯೇನಲ್ಲ
ಬದುಕು

ಗಿರಕಿ ಹೊಡೆಯುತ್ತಿದೆ
ಗುಹೆಯ ಉದ್ದಗಲಕ್ಕೂ ಬಾವಲಿ
ದಕ್ಕದು ಹಾದಿ ಬೆಳಕಿಗೂ

ಕಿರುಬಗಳ ದಾಂಧಲೆಗೆ
ಸಿಂಹವೂ ಕಕ್ಕಾಬಿಕ್ಕಿ
ನರಿ ಮಾತ್ರ ನಗುತ್ತಿದೆ ಸಿಂಹಾಸನದ ಮೇಲೆ

ಶಹರದಲ್ಲಿ ಗುಲ್ಲು
ಸಂಜೆಗೆ ಸುಂಕವಂತೆ
ಕತ್ತಲ ಗರ್ಭದಲ್ಲಿ ಏನು ಗುಟ್ಟು?

ಬೇಕಿಲ್ಲ ಬೇರೇನೂ
ಹೂವೊಂದು ನಗುವುದಕೆ
ಸಾಕು ಸಮೀಪದಲ್ಲೊಂದು ಪಾತರಗಿತ್ತಿ